# ಮನಸ್ಸನ್ನೇ ಗಾಂಧಿಬಜಾರು ಮಾಡಿಕೊಂಡ ಗೌರೀಶ



**ವಾಸುದೇವ ನಾಡಿಗ್**

ಕಲೆ: ಎಸ್.ವಿ.ಹೂಗಾರ್

ಶಾಂತಿನಾಥ ದೇಸಾಯಿ ಅವರು ಬರೆದ 'ಮುಕ್ತಿ' ಕಾದಂಬರಿಯನ್ನು ನಾನು ಓದಿದ್ದು ನನ್ನ ಹರೆಯದ ಹದಿನಾರರಲ್ಲಿ. ಹತ್ತನೇ ತರಗತಿಯಲ್ಲಿ ಕಳಪೆ ಅಂಕ ಪಡೆದು ಇಹವೂ ಇಲ್ಲದ ಪರವೂ ಒಲ್ಲದ ಸ್ಥಿತಿಯಲ್ಲಿ ಓದಿದ ಕಾದಂಬರಿ. ನನಗೆ ನಾನೇ ಅಕಾರಣವಾದ ವಿಷಾದವನ್ನು ಆವಾಹಿಸಿಕೊಂಡು ಮಾದಕ ಕನಸುಗಳನ್ನು ಮುಳ್ಳ ಬೇಲಿಗೆ ಕಟ್ಟಿ ನಲುಗುತ್ತಿದ್ದ ಕಾಲಮಾನದಲ್ಲಿ ನನಗೆ ಸಿಕ್ಕ ಕಾದಂಬರಿ 'ಮುಕ್ತಿ' ಮತ್ತು ಅದರ ನಾಯಕ ಗೌರೀಶ.

ಗೌರೀಶನ ಪಾತ್ರ ದೇಶ-ಕಾಲ ಅತೀತವಾದುದು. ಅವನು ಕೇಳುವ ಪ್ರಶ್ನೆಗಳು ಮತ್ತು ತಾಳುವ ನಿರ್ಧಾರ ಯಾರನ್ನೂ ಬಿಡವು. ಅದು ಎಲ್ಲರನ್ನೂ ಆವರಿಸುವ ಬಿಗಿಬಳ್ಳಿ. ನಾನು ಅಂದು ಓದಿದ ಕಾದಂಬರಿ ಮತ್ತೆ ಮತ್ತೆ, ಈ ಜೀವನದ ಅರ್ಧ ಆಯುಷ್ಯ ಕಳೆದರೂ ಹತ್ತಾರು ಬಾರಿ ಓದಿಸಿಕೊಂಡಿದೆ. ಇಂಥದ್ದೊಂದು ಕಥನ, ಕೇವಲ ಕಥನವ್ಯಾಪ್ತಿಗಷ್ಟೇ ಸೀಮಿತವಾಗದೇ ಮನುಷ್ಯನ ಮೂಲಭೂತ ಸೋಲು ಮತ್ತು ದೃಢ ನಿರ್ಧಾರಗಳನ್ನು ಕೈಗೊಳ್ಳದ ಪೆಕರುತನಕ್ಕೆ ಉತ್ತರವನ್ನು ಕೊಡುವುದರಲ್ಲಿ ನಿರತವಾದ 'ಕ್ಲಾಸ್ ರೂಂ' ಅನಿಸುತ್ತದೆ.

ಗೌರೀಶ ಎಲ್ಲ ಕಾಲದ ಸಹೃದಯ ಮನುಷ್ಯರ ಭಾವ ಪ್ರತಿನಿಧಿ. ಮನುಷ್ಯ ಎಂಬ ಭಿನ್ನವಾದ ಪ್ರಾಣಿ ಅನುಭವಿಸಬಲ್ಲ ಎಲ್ಲ ರೋಮಾಂಚನ ಮತ್ತು ತಲ್ಲಣಕ್ಕೆ ಕನ್ನಡಿ ಅವನ ವ್ಯಕ್ತಿತ್ವ. ಈ ಪಾತ್ರ ಮನಸ್ಸಿನ ಮೇಲೆ ಬರೆದು ಬಿಡುವ ಚಿತ್ರ ಸುಲಭವಾಗಿ ಅಳಿಸಿಕೊಳ್ಳಲಾಗುವುದಿಲ್ಲ. ಜೀವಕ್ಕೆ ದೇಹದಿಂದ ಮುಕ್ತಿ ಸಿಗಬಹುದು, ಆದರೆ ವಿಚಾರಗಳಿಂದ ಮುಕ್ತಿ ಇಲ್ಲ. ರೂಪಾಂತರಗೊಳ್ಳುತ್ತ ಹೋಗುವ ಮೂಲ ಸಂವೇದನೆಯಿಂದ ಮನಸ್ಸಿಗೆ ಮುಕ್ತಿ ಇಲ್ಲ. ಕಾದಂಬರಿಯಲ್ಲಿ ಗೌರೀಶನ ಪಾತ್ರವನ್ನು ಇತರ ಎಲ್ಲ ಪಾತ್ರಗಳೂ ಕೆತ್ತುತ್ತ ಹೋಗಿ ಅಂತಿಮವಾಗಿ ನಮ್ಮ ಹೃದಯದಲ್ಲಿ ಅವನ ಚಿತ್ರವೊಂದು ಛಾಪೊತ್ತುವಂತೆ ಮಾಡುತ್ತವೆ. ವ್ಯಕ್ತಿ ಒಬ್ಬನೇ ಇರಬಹುದು; ವ್ಯಕ್ತಿತ್ವ ಹಲವರ ಸಹಾನುಭೂತಿ ಮತ್ತು ಪ್ರತಿಕ್ರಿಯೆಗಳಿಂದಲೇ ರೂಪುಗೊಳ್ಳುತ್ತದೆ. ಹೀಗೆ ಹಲವರು ಕಡೆದಿಟ್ಟ ಮೂರ್ತಿ 'ಮುಕ್ತಿ'ಯ ನಮ್ಮ ಗೌರೀಶ.

ನನ್ನನ್ನು ಉದ್ಧಾರ ಮಾಡಲೆಂದೇ ಇಳಿದಿದ್ದಾನೋ ಎಂಬ ಆಪ್ತ ಗೆಳೆಯ ಗೌರೀಶ (ಡಾಲಿ ಪ್ರೀತಿಯಿಂದ ಅವನನ್ನು ಗೋರಿ ಎಂದು ಕರೆಯುತ್ತಿದ್ದುದು) ನನ್ನ ಆ ಹರೆಯದ ಹೂ ಚಿಟ್ಟೆಯಾಟದ ಆಡುಂಬೊಲದಲ್ಲಿ ಅಂಪೈರ್ ಆಗಿ ನಿಂತವನ ಹಾಗೆ ಕಾಡಿದ್ದಾನೆ. ಕಾದಂಬರಿಯೊಳಗೆ ಅವನು ಆಡುವ ಮಾತು ಮತ್ತು